ಕತೆ



ಗೋಪೀನಾಥ ರಾವ್

# ಮುಂದೆ ಬಂದರೆ ಹಾಯಬೇಡಿ

"ನಿನ್ನ ಅಳಿಯ ಹೇಳೋದು ಕೇಳು... ಹೆರಿಗೆ ಇಲ್ಲೇ ದುಬೈಯಲ್ಲೇ ಮಾಡಿಸುವುದಂತೆ. ನಿಮ್ಮ ಹಳ್ಳಿಯಲ್ಲಿ ಆಸ್ಪತ್ರೆಯಿಲ್ಲ. ಹತ್ತಿರದ ಆಸ್ಪತ್ರೆ ಎಂದರೂ ಹದಿನೈದು ಕಿ.ಮೀ ದೂರ ಇದೆ. ಅಲ್ಲಿಯೂ ಎಲ್ಲಾ ಸವಲತ್ತುಗಳಿಲ್ಲ. ಬಾಡಿಗೆ ಕಾರು ಬೇಕಾದಾಗ ಸಿಗುತ್ತದೆ ಎಂಬ ಧೈರ್ಯ ಇಲ್ಲ. ಮೇಲಾಗಿ ನಮಗೆ ಇನ್ಸುರೆನ್ಸ್ ಇರುವಾಗ ಇಲ್ಲೇ ಸುಸಜ್ಜಿತ ಆಸ್ಪತ್ರೆಯಲ್ಲೇ ಹೆರಿಗೆ ಮಾಡಿಸುವುದು ಒಳ್ಳೆಯದು. ಇದನ್ನೆಲ್ಲ ವಿವರಿಸಿ ನಿನ್ನಮ್ಮನನ್ನು ಒಪ್ಪಿಸು, ಮಾವ ಮತ್ತು ಅತ್ತೆ ಇಬ್ಬರಿಗೂ ತತ್ಕಾಲಿನಲ್ಲಿ ಪಾಸ್‌ಪೋರ್ಟ್ ಹಾಗೂ ವೀಸಾ ಮಾಡಿಸೋಣ, ಅನುಕೂಲ ಇದ್ದರೆ ಇಬ್ಬರೂ ಇಲ್ಲೇ ಬಂದು ಬಿಡಲಿ. ಅದು ಕಷ್ಟ ಎಂದಾದರೆ ಅತ್ತೆ ಮಾತ್ರವಾದ್ರೂ ಬರಲಿ, ಹೆರಿಗೆಯಾದ ಮೇಲೆ ಬೇಕಿದ್ರೆ ನೀನು ಅತ್ತೆಯೊಂದಿಗೆ ಊರಿಗೆ ಹೋಗಿ ಒಂದೆರಡು ತಿಂಗಳು ಇದ್ದು ಬಾ ಅನ್ನುತ್ತಿದ್ದಾರೆ" ಅಂದಳು ಮಗಳು.

"ಏನೇ ಹಾಗೆ? ನಿನ್ನಪ್ಪನಿಗೆ ಹೇಳಿದೆಯೇನೇ? ಮೊದಲ ಹೆರಿಗೆ ನಮ್ಮನೇಲೆ ಮಾಡಿ ಕಳಿಸೋದು